ರಾಜಧಾನಿ ರೆಕ್ಜಾವಿಕ್ ಸಮೀಪ ಹಾಗೂ ದ್ವೀಪದ ದಕ್ಷಿಣ ಭಾಗದ ಗೋಲ್ಡನ್ ಸರ್ಕಲ್‌ನಲ್ಲಿರುವ ಬಹಳ ಜನಪ್ರಿಯ ಪ್ರೇಕ್ಷಣೀಯ ಸ್ಥಳ, ಗಲ್ಫಾಸ್ ಜಲಪಾತ. ಮೇಲೆ ನಿಂತು ನೋಡಬೇಕಾದ ವಿಭಿನ್ನ ಜಲಪಾತ. ರಭಸದಿಂದ ಧುಮುಕುವ ಈ ಜಲಪಾತಕ್ಕೆ 'ಗೋಲ್ಡನ್ ಫಾಲ್ಸ್' ಎಂದು ಕರೆಯುತ್ತಾರೆ.

ದಕ್ಷಿಣ ಐಸ್‌ಲ್ಯಾಂಡ್‌ನ ಸ್ಕೋಗ ಜಲಪಾತಕ್ಕೆ ಬಹಳ ಎತ್ತರದ ಜಲಪಾತಗಳಲ್ಲಿ ಒಂದೆಂಬ ಖ್ಯಾತಿ. 60 ಮೀಟರ್ ಎತ್ತರದಿಂದ ಧುಮುಕುತ್ತ, ನೋಡುಗರ ಎದೆಬಡಿತ ಹೆಚ್ಚಿಸುತ್ತದೆ. ಗಟ್ಟಿಮನಸ್ಸು ಮಾಡಿ ಜಲಪಾತದ ಮೇಲ್ಭಾಗಕ್ಕೆ ಹೋದವರಿಗೆ ಅನೂಹ್ಯ ಅನುಭವ ಗ್ಯಾರಂಟಿ. ಜಲಪಾತದಲ್ಲಿ ಮೂಡುವ ಕಾಮನಬಿಲ್ಲಿನಿಂದ 'ರೇನ್‌ಬೋ ಫಾಲ್ಸ್' ಎಂಬ ಗರಿಮೆ ಇದಕ್ಕಿದೆ.

ಇನ್ನೊಂದು ರುದ್ರರಮಣೀಯ ಜಲಪಾತ ಸೆಲಿಜಾಲಂಡ ಫಾಸ್ (Selijalanda Foss). 360 ಡಿಗ್ರಿ ನೋಟ ಒದಗಿಸುವ ಈ ಜಲಪಾತವನ್ನು ಹಿಂದಿನಿಂದ ವೀಕ್ಷಿಸಬಹುದು. ಇದರ ಸಮೀಪ ಬಹಳಷ್ಟು ಸಣ್ಣಪುಟ್ಟ ಜಲಪಾತಗಳಿದ್ದು, ಅವುಗಳಲ್ಲಿ ವಿಶಿಷ್ಟ ಅನುಭವ ನೀಡುವುದು GLJU ಜಲಪಾತ. ಬೆಟ್ಟದ ಒಳಗೆ ಬಚ್ಚಿಟ್ಟುಕೊಂಡಂತಿರುವ ಜಲಪಾತ ಹೊರಗಿನಿಂದ ಕಾಣಿಸದೆ, ಒಳಗೆ ಹೋದಾಗ ತನ್ನ ಮೋಹಕತೆ ತೆರೆದಿಡುತ್ತದೆ. ಇದನ್ನು ನೋಡಲು ನೀರಿನ ಕಾಲುವೆ ಮೂಲಕ ಒಳಹೋಗಬೇಕು. ಮಂಜಿನ ಹನಿಯಂತೆ ಬೀಳುವ ನೀರು ಸ್ಪರ್ಶಿಸಿದಾಗ ಮೈಮರೆತು ಮನಬಿಚ್ಚಿ ಕೂಗಬೇಕೆನಿಸುತ್ತದೆ.

ಮಹಾವಿಷ್ಣುವಿನ ದಶಾವತಾರ ನೆನಪಿಸುವಂತೆ 30 ಅಡಿ ವಿಸ್ತಾರದೊಂದಿಗೆ ಧುಮುಕುವ ಗೋಡಾಫಾಸ್ 'ದೇವರುಗಳ ಜಲಪಾತ' (Waterfalls of Gods) ಎಂದೇ ಕರೆಸಿಕೊಂಡಿದ್ದು, ಐಸ್‌ಲ್ಯಾಂಡ್‌ನ ಉತ್ತರ ಭಾಗದಲ್ಲಿದೆ. ಯೂರೋಪ್‌ನಲ್ಲೇ ಅತಿ ಶಕ್ತಿಯುತ ಜಲಪಾತವೆಂಬ ಖ್ಯಾತಿಯ, ಭೂಮಿಯೇ ಕಂಪಿಸುವ ಅನುಭವ ನೀಡುವ ಡೆಟ್ಟಿಫಾಸ್ ಕೂಡ ಪ್ರಸಿದ್ಧ ಜಲಪಾತ. ಆ ದಿನ ಚಂಡಮಾರುತದ ಮುನ್ಸೂಚನೆ ಕಾರಣ, ಇದನ್ನು ವೀಕ್ಷಿಸಲಾಗಲಿಲ್ಲ.

## ಹಿಮದ ಮಡಿಲಲ್ಲಿ ಬಿಸಿನೀರಿನ ಬುಗ್ಗೆ

ಜ್ವಾಲಾಮುಖಿ, ಅಗ್ನಿಪರ್ವತಗಳನ್ನು ಒಳಗೊಂಡ ದ್ವೀಪರಾಷ್ಟ್ರ ಐಸ್‌ಲ್ಯಾಂಡ್. ರೆಕ್ಜಾವಿಕ್‌ನಲ್ಲಿ ರಿಂಗ್ ರಸ್ತೆಯಿಂದ ಪ್ರಾರಂಭವಾಗಿ ಮತ್ತೆ ಅಲ್ಲಿಗೆ ಬಂದು ಸೇರುವ ಗೋಲ್ಡನ್ ಸರ್ಕಲ್‌ನ ಪ್ರೇಕ್ಷಣೀಯ ಸ್ಥಳ, 'ದಿ ಗ್ರೇಟ್ ಗೀಸರ್ಸ್ ಆಫ್ ಐಸ್‌ಲ್ಯಾಂಡ್' ಎಂಬ ಖ್ಯಾತಿಯ ಬೃಹತ್ ಬಿಸಿನೀರಿನ ಬುಗ್ಗೆಗಳು. ಕೆಲ ಭೂಪ್ರದೇಶಗಳ ಒಳಪದರದೊಳಗಿನ ಒತ್ತಡ, ಘರ್ಷಣೆಯಿಂದ ಪ್ರತಿ 20 ನಿಮಿಷಗಳಿಗೊಮ್ಮೆ ರಭಸದಿಂದ ಚಿಮ್ಮುವ ಬಿಸಿನೀರಿನ ಬುಗ್ಗೆಗಳಿಲ್ಲಿವೆ.

ಇಲ್ಲಿ ಹೆಚ್ಚಿನ ಪ್ರವಾಸಿಗರು ಭೇಟಿ ನೀಡುವ ಭೂಶಾಖದ ತಾಣ ಹೌಕಡಲೂರ್. ಈ ಕಣಿವೆ ಬಿಸಿನೀರಿನ ಬುಗ್ಗೆಗಳ ತವರು. ಎರಡು ದೊಡ್ಡ ಬಿಸಿನೀರಿನ ಬುಗ್ಗೆಗಳಲ್ಲದೆ 40ಕ್ಕೂ ಹೆಚ್ಚು ಸಣ್ಣ ಬುಗ್ಗೆಗಳಿವೆ. ಈ ಬುಗ್ಗೆಗಳಿಂದ



ಹಿಮನೆಲದಲ್ಲಿ ಚಿಮ್ಮುವ ಬಿಸಿನೀರಿನ ಬುಗ್ಗೆ

ಬಿಸಿ ನೀರು ಚಿಮ್ಮುತ್ತಿದ್ದರೆ, ಭೂಮಿಯೇ ಉಸಿರಾಡುತ್ತಿರುವಂತೆ ಭಾಸವಾಗುತ್ತದೆ. ಈ ಬುಗ್ಗೆಗಳಿಂದಾಗಿಯೇ 'ಗೀಸರ್' ಪದ ಹುಟ್ಟಿ ಇದಕ್ಕೆ ಐಸ್‌ಲ್ಯಾಂಡ್ ಆದ್ಯ ಪ್ರವರ್ತಕವೆನಿಸಿದೆ. ಇಲ್ಲಿನ ಪ್ರಾಚೀನ ಬಿಸಿನೀರಿನ ಬುಗ್ಗೆ ಈಗ ನಿಂತಿದ್ದು, ಅದರ ಸೋದರ 'ಸ್ಟ್ರೋಕರ್ ಗೀಸರ್' ಪ್ರಮುಖ ಆಕರ್ಷಣೆಯಾಗಿದೆ.

ಐಸ್‌ಲ್ಯಾಂಡ್ ನೈರುತ್ಯ ಭಾಗದ ಭೂಪ್ರದೇಶ ಅತಿ ಹೆಚ್ಚಿನ ಜ್ವಾಲಾಮುಖಿ ಚಟುವಟಿಕೆಯಿಂದ ಕೂಡಿದ್ದು, ಬಿಸಿನೀರಿನ ಕೊಳಗಳನ್ನು ಹೊಂದಿದೆ. ಹೆಚ್ಚಿನ ಬಿಸಿನೀರಿನ ಕೊಳಗಳು ಸ್ಥಗಿತಗೊಂಡಿದ್ದು, ಎರಡು ಕೊಳಗಳಲ್ಲಿ ಬಿಸಿ ನೀರಿನ ಚಿಮ್ಮುವಿಕೆ ಇನ್ನೂ ಇದೆ. ಪ್ರತಿ ಕೊಳದ ತಾಪಮಾನ 80–100 ಡಿಗ್ರಿ ಸೆಲ್ಸಿಯಸ್. ಕೊಳಗಳಿಂದ ಸ್ಥಳೀಯರ ದಿನನಿತ್ಯದ ಬಳಕೆಗೆ ಬಿಸಿನೀರು ಸರಬರಾಜು ವ್ಯವಸ್ಥೆ ಇದೆ. ದ್ವೀಪದಲ್ಲಿ ಕ್ರಿಯಾಶೀಲ ಜ್ವಾಲಾಮುಖಿ ಇರುವುದರಿಂದ, ಸಲ್ಫರ್ ಮಿಶ್ರಿತ ಬಿಸಿನೀರು ದೊರೆಯುತ್ತದೆ.

## ಕಪ್ಪು ಮರಳಿನ ಕಡಲತೀರಗಳು

ಐಸ್‌ಲ್ಯಾಂಡ್, ಗ್ರೀನ್‌ಲ್ಯಾಂಡ್ ಸಮುದ್ರ ಹಾಗೂ ಉತ್ತರ ಅಟ್ಲಾಂಟಿಕ್ ಸಾಗರದಿಂದ ಸುತ್ತುವರೆದಿದ್ದು, ಇಲ್ಲಿನ ಕಡಲತೀರಗಳು ಕಪ್ಪು ಬಣ್ಣದ ಮರಳಿನ ತೀರ, ಬೆಣಚು ಕಲ್ಲುಗಳು ಹಾಗೂ ವಿಶಿಷ್ಟ ಶಿಲಾರಚನೆಯಿಂದ ಕೂಡಿವೆ.

ಕಡಲುಗಳಲ್ಲಿ 'ಸ್ನೀಕರ್' ಎಂಬ ದೈತ್ಯಾಕಾರದ ಅತಿ ಶಕ್ತಿಶಾಲಿ ಅಲೆಗಳು ನೈಸರ್ಗಿಕವಾಗಿ ಉಂಟಾಗುತ್ತವೆ. ಯಾವುದೇ ಮುನ್ಸೂಚನೆಯಿಲ್ಲದೇ ರೈಲ್ವೆ ಬೋಗಿಯಂತೆ ಕಾಣುವ ಸಣ್ಣಪುಟ್ಟ ಅಲೆಗಳು ಗುಂಪಾಗಿ ಸ್ನೀಕರ್ ಎಂಬ ಅತಿ ಶೀತಲ ಅಲೆಯ ರೂಪ



ಪಡೆದು ಯಾರನ್ನಾದರೂ ಕ್ಷಣಮಾತ್ರದಲ್ಲಿ ಸೆಳೆದೊಯ್ಯಬಲ್ಲದು. ಈ ಅಲೆಯನ್ನು ದೂರದಿಂದಲಾದರೂ ನೋಡಲು ಸಾಧ್ಯವೇ ಎಂದು ಸುರಕ್ಷಿತ ತಾಣದಲ್ಲಿ ನೋಡುತ್ತಿದ್ದ ನಮ್ಮ ಪಾದಕ್ಕೆ ತಣ್ಣಗಿನ, ಆದರೆ ರಭಸದ ಅಲೆಯೊಂದು ಸ್ಪರ್ಶಿಸಿದ್ದು, ಅದು ಕಡಿಮೆ ಶಕ್ತಿಯ ಸ್ನೀಕರ್ ಎಂದು ಅರಿತಾಗ ಆದ ದಿಗಿಲು ಮರೆಯಲಾಗದ್ದು.

ಇಲ್ಲಿನ ದಕ್ಷಿಣ ಕರಾವಳಿಯಲ್ಲಿ ಕಪ್ಪು ಬಣ್ಣದ ಮರಳಿನ ಕಡಲಿನ ತೀರಗಳಿದ್ದು, ಇವುಗಳಲ್ಲಿ ನಾವು ಕಂಡ ಎರಡು ಪ್ರಮುಖ ತೀರಗಳೆಂದರೆ ರೈನ್ಸ್‌ಫರಾ ಮತ್ತು ಡೈಮಂಡ್ ಬೀಚ್. ರೈನ್ಸ್‌ಫರಾ, ಪ್ರಪಂಚದ 10 ಪ್ರಮುಖ ಸುಂದರ ಬೀಚ್‌ಗಳಲ್ಲಿ ಒಂದೆಂಬ ಕಿರೀಟ ಧರಿಸಿದೆ. ಅತಿ ಅಪಾಯಕಾರಿ ಬೀಚ್ ಎಂಬ ಕುಖ್ಯಾತಿಯೂ ಇದಕ್ಕಿದೆ.